# PSI/RSI-1 (2014)

**ಗರಿಷ್ಠ ಅಂಕಗಳು: 50** **ಸಮಯ : 90 ನಿಮಿಷಗಳು**

1) ಕೆಳಕಂಡ ಯಾವುದಾದರೂ ಒಂದು ವಿಷಯದ ಬಗ್ಗೆ 600 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ:

ಅ) ಭಾರತದಲ್ಲಿನ ಕಪ್ಪು ಹಣ

ಆ) ಪ್ರಾಕೃತಿಕ ಸಂಪತ್ತು : ವರವೋ ಅಥವಾ ಶಾಪವೋ

ಇ) ಆರ್ಥಿಕ ಪ್ರಗತಿಯ ಮೇಲೆ ಕಾನೂನು ಮತ್ತು ಸುವ್ಯವಸ್ಥೆಯ ಪಾತ್ರ

ಈ) ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆ

ಉ) ಮಹಿಳಾ ಸಬಲೀಕರಣ

2) ಈ ಕೆಳಕಂಡ ಪ್ಯಾರವನ್ನು ಕನ್ನಡದಿಂದ ಆಂಗ್ಲಭಾಷೆಗೆ ಅನುವಾದ ಮಾಡಿ:

ತೇಜಸ್ವಿಯವರ ನೆನಪಿನ ಈ ಉತ್ಸವದಲ್ಲಿ ಬೆಂಗಳೂರಿನಲ್ಲಿರುವ ಎನ್‌ಬಿಐಐ ಎಂಬ ಸಂಸ್ಥೆ ಕೂಡ ಭಾಗಿಯಾಗಿದೆ. ಇದು 'ಕೃಷಿ ಉಪಯೋಗಿ ಕೀಟಗಳ ರಾಷ್ಟ್ರೀಯ ಕಾರ್ಯಶಾಲೆ' (ನ್ಯಾಶನಲ್ ಬ್ಯೂರೊ). ಅಲ್ಲಿನ ಕೀಟ ವಿಜ್ಞಾನಿಗಳು ಸಾಕಷ್ಟು ಜನೋಪಯೋಗಿ ಕೆಲಸಗಳನ್ನು ಮಾಡುತ್ತಿದ್ದಾರೆ. ನಮ್ಮ ಸುತ್ತಮುತ್ತ ಇರುವ ಉಪಕಾರಿ, ಉಪದ್ರವಕಾರಿ ಕೀಟಗಳ ಬಗ್ಗೆ ಎಳೆಯರಿಗೆ, ದೊಡ್ಡವರಿಗೆ ಪ್ರಾತ್ಯಕ್ಷಿಕೆ ಸಿಗಲೆಂದು ಒಂದು ಚಿಕ್ಕ ಜೀವಂತ ಮ್ಯೂಸಿಯಂ ನಿರ್ಮಿಸಿದ್ದಾರೆ. ಕೀಟಗಳನ್ನೇ ಕೀಟಗಳ ವಿರುದ್ಧ ಯುದ್ಧಾಸ್ತ್ರವಾಗಿ ರೂಪಿಸುತ್ತಾರೆ. ಯಾವುದೇ ರಾಜ್ಯದಲ್ಲಿ ಕೀಟಗಳ ಹಾವಳಿ ಅತಿಯಾದರೆ ಅವುಗಳ ಸಮೀಕ್ಷೆಗೆ ಇಲ್ಲಿಂದ ತಜ್ಞರು ಹೋಗುತ್ತಿದ್ದಾರೆ.

ನಮ್ಮ ಅಡಿಕೆ ತೋಟಗಳಲ್ಲಿ ಬೇರುಹುಳುಗಳನ್ನು ಅತ್ಯಂತ ದಕ್ಷತೆಯಿಂದ ತಿಂದು ಮುಗಿಸಬಲ್ಲ ಒಂದು ನೆಮಟೋಡ್ ಪ್ರಭೇದವನ್ನು ಪತ್ತೆ ಹಚ್ಚಿದ್ದಾರೆ. ಅವುಗಳ ಬೀಜಾಣುಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಿ ತೋಟಗಾರಿಕೆ ಸಂಸ್ಥೆಯ ಮೂಲಕ ಶಿವಮೊಗ್ಗ ಭಾಗದ ರೈತರಿಗೆ ವಿತರಿಸುವಲ್ಲಿ ನೆರವಾಗಿದ್ದಾರೆ. ಬೇರುಹುಳ ಹಾವಳಿಯಿಂದ ಕಂಗಾಲಾದ ರೈತರು ಕ್ಲೋರಮ್‌ಫಾಸ್, ರೆಡೊಮಿಲ್, ಥಿಮೆಟ್ ಮುಂತಾದ ಘೋರ ವಿಷಗಳನ್ನು ಅಡಿಕೆ ಮರಗಳ ಬಳಿ ಇನ್ನು ಮೆಲೆ ಸುರಿಯಬೇಕಾಗಿಲ್ಲ. ಹಾಗೆಯೇ ಕಬ್ಬು, ಪಪಾಯ ತೋಟಗಳಲ್ಲಿ ಹಾವಳಿ ಎಬ್ಬಿಸುವ ಹಿಟ್ಟು ತಿಗಣೆಗಳ ವಿರುದ್ಧ, ಕಾಫಿಯ ಕಾಂಡಕೊರಕ ಹುಳುಗಳ ವಿರುದ್ಧ ಕೀಟಗಳನ್ನೇ ಛೂಬಿಡುತ್ತಿದ್ದಾರೆ. ವಿಷ ರಸಾಯನಗಳ ಬಳಕೆಗೆ ಬದಲೀ ಉಪಾಯ ಹುಡುಕುತ್ತಿದ್ದಾರೆ. ಇಂಥದ್ದೊಂದು ಸಂಸ್ಥೆರಾಷ್ಟ್ರದಲ್ಲಿ ಬೇರೆಲ್ಲೂ ಇಲ್ಲ.

ನಮ್ಮ ರಾಜ್ಯಕ್ಕೆ ಐಐಟಿ ಬೇಕು, ಎಐಐಎಮ್‌ಎಸ್ ಬೇಕು ಎಂದೆಲ್ಲ ಪಟ್ಟು ಹಿಡಿಯುವವರು ಬೇಕಾದಷ್ಟು ಮಂದಿ ಇದ್ದಾರೆ. ನಮ್ಮಲ್ಲೇ ಇರುವ ರಾಷ್ಟ್ರೀಯ ಸಂಸ್ಥೆಗಳ ಸೂಕ್ತ ಪ್ರಯೋಜನ ಪಡೆಯುವವರ ಸಂಖ್ಯೆ ತೀರ ಕಡಿಮೆ ಇದೆ. ತೇಜಸ್ವಿ ನೆನಪಿನ ಪ್ರದರ್ಶನಕ್ಕೆ ಮಕ್ಕಳನ್ನು ಕಳಿಸಲು 'ಡಿಡಿಪಿಐಯಿಂದ ನಿರ್ದೇಶನ ಬಂದಿಲ್ಲ' ಎಂದು ಗೊಣಗುವ ಶಾಲೆ– ಕಾಲೇಜುಗಳು ಬೇಕಾದಷ್ಟಿವೆ. ಮಕ್ಕಳಿಗೆ ಇಂಥ ಕಲಿಕೆಯೂ ಬೇಕೆಂದು ಶಾಲೆಗಳನ್ನು ಒತ್ತಾಯಿಸುವ ಪಾಲಕರ ಸಂಖ್ಯೆ ತೀರ ಕಡಿಮೆ ಇದೆ. ಇಂಥ ಸಂಚಾರಿ ಕೀಟ ಪ್ರದರ್ಶನ ತಮ್ಮ ಶಾಲೆಗೂ ಬರಲೆಂದು ಹಾರೈಸುವ ಶಿಕ್ಷಕರು ಬೇಕಾದಷ್ಟಿದ್ದಾರೆ. ಕೊಂಡೊಯ್ಯಬೇಕೆಂಬ ಉತ್ಸಾಹಿ ಅಧಿಕಾರಿಗಳ ಸಂಖ್ಯೆ ತೀರ ಕಡಿಮೆ ಇದೆ. ಕಡತಗಳಿಗೆ ಕೆಂಪುಪಟ್ಟಿ ಬಿಗಿಯುವುದನ್ನು ಬ್ರಿಟಿಷರಿಂದ ಕಲಿತ ನಾವು ಅವರ ನಿಸರ್ಗ ಪ್ರೀತಿಯನ್ನು ಕಲಿಯುವುದು ಯಾವಾಗಲೊ?

3) ಈ ಕೆಳಕಂಡ ಕನ್ನಡ ಲೇಖನವನ್ನು 1/3 ರಷ್ಟಕ್ಕೆ ಇಳಿಸಿ ಸಾರಾಂಶವನ್ನು ಬರೆಯಿರಿ ಮತ್ತು ಅದಕ್ಕೊಂದು ಶೀರ್ಷಿಕೆಯನ್ನು ಕೊಡಿ. ಇದಕ್ಕಾಗಿಯೇ ಉತ್ತರ ಪತ್ರಿಕೆಯೊಂದಿಗೆ ಕೊನೆಯ ಪುಟದಲ್ಲಿ ನೀಡಿರುವ ಚೌಕಗಳನ್ನು ಬಳಸಿರಿ.

ಇತ್ತ ಕರ್ನಾಟಕದಲ್ಲಿ ರಾಜಕೀಯ ಮುಖಂಡರ ಆದೇಶಕ್ಕೆ ತಕ್ಕಂತೆ ಊರೂರಲ್ಲಿ ಸರ್ಕಾರದ ಪರ ಮತ್ತು ವಿರುದ್ಧವಾಗಿ ಘೋಷಣೆ, ಕೂಗಾಟ, ಪಟಾಕಿ ಸಿಡಿತ ನಡೆಯುತ್ತಿದ್ದಾಗ ಅತ್ತ ಚೀನಾದ ಕೆಲವು ರೈತರ ಹೊಲಗಳಲ್ಲಿ ಯಾರ ಆದೇಶವೂ ಇಲ್ಲದೆ ಕಲ್ಲಂಗಡಿ ಹಣ್ಣುಗಳು ತಂತಾವೇ ಪಟಾಕಿಗಳಂತೆ ಸಿಡಿಯುತ್ತ ಸುದ್ದಿ ಮಾಡುತ್ತಿವೆ. ಹೀಗಾಗಲು ಕಾರಣವೇನೆಂದು ಪತ್ತೆ ಹಚ್ಚಲು ಕೃಷಿ ವಿಜ್ಞಾನಿಗಳೂ ಕಲ್ಲಂಗಡಿ ಹೊಲಕ್ಕೆ ಜಿಗಿದಿದ್ದಾರೆ. ಮಾಧ್ಯಮ ವರದಿಗಾರರು ಎದ್ದೂ ಬಿದ್ದೂ ಬೇಲಿ ಜಿಗಿಯುತ್ತ, ಕೆಸರು ತುಳಿಯುತ್ತ ಕಲ್ಲಂಗಡಿ ಸಿಡಿತದ ನೇರ ವೀಕ್ಷಣೆಯ ವರದಿಗಾಗಿ ಧಾವಿಸಿದ್ದಾರೆ. 'ಬೆಳಿಗ್ಗೆ ಹೋಗಿ ಲೆಕ್ಕ ಮಾಡಿದರೆ 80 ಹಣ್ಣುಗಳು ಸಿಡಿದು ಚೂರುಚೂರಾಗಿ ಬಿದ್ದಿದ್ದವು. ಮಧ್ಯಾಹ್ನದ ವೇಳೆಗೆ 100 ದಾಟಿತು. ಎರಡು ದಿನಗಳ ನಂತರ ಲೆಕ್ಕ ಮಾಡುವುದನ್ನೇ ಬಿಟ್ಟುಬಿಟ್ಟೆ' ಎಂದಿದ್ದಾನೆ ದನ್ಯಾಂಗ್ ಪ್ರಾಂತದಲ್ಲಿ ಎಂಟು ಎಕರೆಯಲ್ಲಿ ಕಲ್ಲಂಗಡಿ ಬೆಳೆದಿದ್ದ ರೈತ ಲ್ಯೂಮಿಂಗ್ಯೂಸೊ. ಅಕ್ಕ ಪಕ್ಕದ, ದೂರ ದೂರದ ಸುಮಾರು 20 ಹಳ್ಳಿಗಳಿಗೆ ಸೇರಿದ ಹೊಲಗಳಲ್ಲೆಲ್ಲ ಶೆಲ್ ದಾಳಿ ನಡೆದಂತೆ ಚಿಂದಿ ಚಿಂದಿ ರಕ್ತವರ್ಣದ ಮಾಂಸಲ ತಿರುಳುಗಳು, ಬಿಳಿ ಬೀಜಗಳು, ಹಸಿರು ಚೂರುಗಳು.

ಇದಕ್ಕೆ ರೈತರು ಬಳಸಿದ್ದ ಫೋರ್‌ಕ್ಲೋರ್ ಫೆನ್ಯೂರಾನ್ ಎಂಬ ರಸಾಯನವೇ ಕಾರಣವೆಮಬುದು ಗೊತ್ತಾಗಿದೆ. ಫಸಲು ಚೆನ್ನಾಗಿ ಬರಲೆಂದು ಕಲ್ಲಂಗಡಿ, ಪಪಾಯಾ, ಸೌತೆ, ಅನಾನಸ್ ಮುಂತಾದ ತೋಟಗಾರಿಕೆಯ ಬೆಳೆಗಳಿಗೆ ಈ ಹಾರ್ಮೋನ್‌ನ ಸಿಂಪರಣೆ

ಮಾಡುತ್ತಾರೆ. ಇದರ ಸಿಂಪರಣೆಯಿಂದ ಕಾಯಿಗಳ ಗಾತ್ರ ದೊಡ್ಡದಾಗುತ್ತದೆ. ಎರಡು ವಾರ ಮುಂಚಿತವಾಗಿಯೇ ಕೊಯ್ಲಿಗೆ ಬರುತ್ತದೆ. ಬೆಲೆ ಹೆಚ್ಚು ಸಿಗುತ್ತದೆ ಎಂದು ಕೃಷಿ ವಿಜ್ಞಾನಿಗಳೇ ರೈತರಿಗೆ ಇದನ್ನು ಕಲಿಸಿದ್ದಾರೆ. ಈ ಬಾರಿ ತೀರ ತಡವಾಗಿ, ಅಂದರೆ ಕಾಯಿ ಬಲಿತ ನಂತರ, ಅದೂ ತೇವಾಂಶ ಹೆಚ್ಚಿಗೆ ಇದ್ದಾಗ ಸಿಂಪರಣೆ ನಡೆದಿದೆ. ಕಲ್ಲಂಗಡಿಯ ಹೊರಗಿನ ಸಿಪ್ಪೆ ಗಟ್ಟಿ ಬೆಳೆದು ಬಿಟ್ಟಿದೆ. ಹಾರ್ಮೋನ್ ಪರಿಣಾಮದಿಂದಾಗಿ ಕಾಯಿಯ ಒಳಗಿನ ಕೋಶಗಳಲ್ಲಿ ಒತ್ತಡ ಜಾಸ್ತಿಯಾಗಿದ್ದರಿಂದ ಸಿಡಿತ ಸಂಭವಿಸಿದೆ. ದನಕರುಗಳಿಗೆ, ಮೀನು, ಕೋಳಿಗಳಿಗೆ ಮೇಜವಾನಿ ನಡೆದಿದೆ. ಯಾರಿಗೇನೂ ಅಪಾಯ ಉಂಟಾಗಿಲ್ಲವಾದರೂ ಚೀನಾದ ಮಾಧ್ಯಮಗಳಲ್ಲಿ ಕೃಷಿರಂಗದ ಅತಿರೇಕಗಳ ಬಗ್ಗೆ ಮತ್ತೊಮ್ಮೆ ವ್ಯಾಪಕ ಟೀಕೆ ವ್ಯಕ್ತವಾಗಿದೆ. ಅಲ್ಲಿ ಕೂಡ ನಮ್ಮಲ್ಲಿಯಂತೆ ಕೃಷಿ ರಸಾಯನಗಳನ್ನು ಯದ್ವಾತದ್ವಾ ಬಳಸಲಾಗುತ್ತಿದೆ. ನಮ್ಮಲ್ಲಿಯಂತೆ ಹೊಲಕ್ಕೆ ಕೃಷಿತಜ್ಞರ ಭೇಟಿ ಅಥವಾ ಮೇಲ್ವಿಚಾರಣೆ ಅಪರೂಪವಾಗಿರಬೇಕು. ಅಲ್ಲಿ ಈಚಿನ ವರ್ಷಗಳಲ್ಲಿ ಅಕ್ಕಿಯಲ್ಲಿ ವಿಷಕಾರಿ ಕ್ಯಾಡ್ಮಿಯಂ ಪತ್ತೆಯಾಗಿತ್ತು . ಹಾಲಿನಲ್ಲಿ, ಹಾಲಿನ ಪುಡಿಯಲ್ಲಿ ಮೆಲಮೈನ್ ವಿಷ ಸೇರ್ಪಡೆಯಾಗಿ ಅನೇಕ ಮಕ್ಕಳು ಸಾವನ್ನಪ್ಪಿ ದೇಶ ವಿದೇಶಗಳಿಗೆ ಅಪಕೀರ್ತಿ ಹಬ್ಬಿತ್ತು . ಸೋಯಾ ಸಾಸ್‌ನಲ್ಲಿ ಆರ್ಸೆನಿಕ್ ವಿಷ ಪತ್ತೆಯಾಗಿತ್ತು . ಅಣಬೆಗಳಲ್ಲಿ ಬ್ಲೀಚಿಂಗ್ ಪುಡಿ, ಹಂದಿಮಾಂಸದಲ್ಲಿ ಬೋರಾಕ್ಸ್ ಕಣಗಳು ಪತ್ತೆಯಾಗಿದ್ದವು. ಕೋಳಿಗಳಿಗೆ ತೂಕ ಬರಲೆಂದು ಬೇರಿಯಂ ಖನಿಜ ಪುಡಿಗಳನ್ನು ಮಾಂಸಖಂಡಗಳಲ್ಲಿ ತೂರಿಸಿದ್ದು .

ಮೆಣಸನ್ನು ಕೃತಕ ಕೆಂಪು ಬಣ್ಣದಲ್ಲಿ ತೋಯಿಸಿ ಒಣಗಿಸಿದ್ದು ಈಚಿನ ಕೆಲವು ವಾರಗಳಲ್ಲಿ ಬೆಳಕಿಗೆ ಬಂದಿತ್ತು . ಅಷ್ಟೇಕೆ, ಗರ್ಭಧಾರಣೆಯನ್ನು ತಡೆಗಟ್ಟಬಲ್ಲ ಹಾರ್ಮೋನ್‌ಗಳು ಸೌತೆಕಾಯಿಯಲ್ಲಿ ಪತ್ತೆಯಾಗಿವೆಯೆಂದು 'ಚೈನಾ ಡೇಲಿ' ಪತ್ರಿಕೆ ವರದಿ ಮಾಡಿತ್ತು . 'ಎಲ್ಲರೂ ಆದಷ್ಟು ಬೇಗ, ಆದಷ್ಟು ಹೆಚ್ಚು ಲಾಭ ಗಳಿಸುವ ಪೈಪೋಟಿಯಲ್ಲಿದ್ದಾರೆ. ನಾವು ತಿನ್ನುವ ಯಾವುದೂ ಸುರಕ್ಷಿತವೆಂದು ನನಗೆ ಅನ್ನಿಸುತ್ತಿಲ್ಲ' ಎಂದು ಹೀಬೇ ಪ್ರಾಂತದ ರೈತನೇ ಹೇಳಿರುವುದನ್ನು ಲಂಡನ್ನಿನ 'ಗಾರ್ಡಿಯನ್' ಪತ್ರಿಕೆ ಉಲ್ಲೇಖಿಸಿದೆ. ಆಹಾರ ಉತ್ಪಾದನೆ ಮತ್ತು ವಿತರಣೆಯ ಮಾರ್ಗದಲ್ಲಿ ನಡೆಯುವ ಈ ಎಲ್ಲ ಅವಾಂತರಗಳು ಎಳೆಯ ಪೀಳಿಗೆಯ ಮೇಲೆ ವಿಪರೀತ ಪರಿಣಾಮ ಬೀರುತ್ತಿದೆ. ಚೀನಾದಲ್ಲಿ ದಢೂತಿ ಮಕ್ಕಳ ಸಂಖ್ಯೆ ಹೆಚ್ಚುತ್ತಿವೆ. ಕುಟುಂಬದ ಒಂದೇ ಮಗು ಎಂಬ ಅಕ್ಕರೆಯಿಂದ ತಾಯಂದಿರು ನಾನಾ ಬಗೆಯ ಬೇಬಿ ಫುಡ್ ತಿನ್ನಿಸುತ್ತಾರೆ. ಶೀಘ್ರ ಬೆಳವಣಿಗೆಯ (ಗ್ರೋಥ್) ಹಾರ್ಮೋನ್‌ಗಳು ಮತ್ತು ಜೀವಸತ್ವಗಳಿಂದ ಸಮೃದ್ಧಗೊಳಿಸಿದ, ಡಬ್ಬೀಕರಿಸಿದ ಆಹಾರವನ್ನೇ ಕೊಡುತ್ತಾರೆ. ಆದರೆ ಆರೋಗ್ಯವೃದ್ಧಿಗೆ ಕಾರಣವಾಗಬೇಕಿದ್ದ ಆಹಾರವೇ ಆರೋಗ್ಯವನ್ನು ಹಾಳು ಮಾಡುವಂತಾಗಿದೆ. ರಕ್ತದೊತ್ತಡ, ಸಕ್ಕರೆ ಕಾಯಿಲೆ, ಯಕೃತ್ತಿನ ದೋಷದಿಂದ ತೊಂದರೆ ಅನುಭವಿಸುವ ಎಳೆಯರ ಸಂಖ್ಯೆ ಹೆಚ್ಚುತ್ತಿದೆ. ಅಭಿವೃದ್ಧಿಯ ದಾಪುಹೆಜ್ಜೆಗಳ ನಡುವಣ ಇಂಥ ಅವಾಂತರಗಳನ್ನು ತಡೆಯಲೆಂದು ಚೀನಾ ಇತ್ತೀಚೆಗೆ ರಾಷ್ಟ್ರಮಟ್ಟದಲ್ಲಿ ಆಹಾರ ಸುರಕ್ಷಾ ಸಮಿತಿಯನ್ನು ರಚಿಸಿ ಅದಕ್ಕೆ ಕ್ಯಾಬಿನೆಟ್ ದರ್ಜೆಯ ಮುಖ್ಯಸ್ಥನನ್ನು ನೇಮಕ ಮಾಡಿದೆ. 'ಗ್ರಾಮೀಣ ವಿದ್ಯಮಾನಗಳನ್ನು ರಾಷ್ಟ್ರದ ಗಮನಕ್ಕೆ ತರುತ್ತಿರುವಲ್ಲಿ ಮಾಧ್ಯಮಗಳೂ ಪ್ರಮುಖ ಪಾತ್ರ ವಹಿಸತೊಡಿಗಿವೆ' ಎಂದು ಮುಖ್ಯಸ್ಥ ಝೂಂಗ್ ಯೊಂಗ್ ಹೇಳಿದ್ದು ಕೂಡ ವರದಿಯಾಗಿದೆ.

ನಮ್ಮಲ್ಲೂ ಮಕ್ಕಳ ನೀರಿನ ಲೋಟದಲ್ಲಿ, ಹಾಲಿನ ಬಾಟಲಿಯಲ್ಲಿ, ಊಟದ ಬಟ್ಟಲಲ್ಲಿ, ಹಣ್ಣಿನ ಬುಟ್ಟಿಯಲ್ಲಿ ಆರೋಗ್ಯಕ್ಕೆ ಮಾರಕವಾಗುವ ಅಂಶಗಳು ನಿತ್ಯವೂ ಸೇರ್ಪಡೆಯಾಗುತ್ತಿವೆ.ಆದರೆ ವ್ಯವಸ್ಥಿತ ಸಮೀಕ್ಷೆ ನಡೆಯುತ್ತಿಲ್ಲ; ಆದ್ದರಿಂದ ಅವು ಬೆಳಕಿಗೆ ಬರುತ್ತಿಲ್ಲ. ಆರೋಗ್ಯ , ಕೃಷಿ, ಆಹಾರ ಮತ್ತು ಗ್ರಾಮೀಣ ವಿದ್ಯಮಾನಗಳು ಮಾಧ್ಯಮಗಳಿಗೆ ಆದ್ಯತೆ ವಿಷಯಗಳಾಗಿಲ್ಲ. ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ಪಿ. ಸಾಯಿನಾಥ್ ಹೇಳುವ ಹಾಗೆ, ಕಾರ್ಪೊರೇಟ್ ಜಗತ್ತನ್ನು ಸುತ್ತುವ ವರದಿಗಾರರ ಸಂಖ್ಯೆ ಏರುತ್ತಿದೆ; ಕೃಷಿ ಜಗತ್ತನ್ನು ಓಡಾಡಿ ವರದಿ ಮಾಡುವವರ ಸಂಖ್ಯೆ ದಿನದಿನಕ್ಕೆ ಕಡಿಮೆಯಾಗುತ್ತಿದೆ. ಇನ್ನು ಆಹಾರ ವಸ್ತುಗಳ ಸಂರಕ್ಷತೆ ಮತ್ತು ಶಿಷ್ಟತೆ ಕುರಿತ ಕಾನೂನು (ಫುಡ್ ಸೇಫ್ಟಿ ಆಂಡ್ ಸ್ಟ್ಯಾಂಡರ್ಡ್ಸ್ ಆಕ್ಟ್- ಎಫ್.ಎಸ್.ಎಸ್,ಎ) 2006 ರಲ್ಲಿ ರೂಪಿತವಾಗಿದ್ದರೂ ಮೊನ್ನೆ ಮಾರ್ಚ್ ನಲ್ಲಷ್ಟೆ ಅದಕ್ಕೆ ಸಂಬಂಧಿಸಿದ ನಿಯಮಗಳು ರಾಷ್ಟ್ರಪತ್ರದಲ್ಲಿ ಪ್ರಕಟವಾಗಿವೆ. ಅದನ್ನು ಟೀಕಿಸಿ ಆಹಾರ ಸಂಸ್ಕರಣೆ ಮತ್ತು ಔಷಧ ಉದ್ಯಮಗಳು ಆಕ್ಷೇಪಣೆಗಳ ಸರಮಾಲೆಯನ್ನೇ ನೇಯುತ್ತಿವೆ. ಕರ್ನಾಟಕದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರನ್ನೇ 'ಆಹಾರ ಸುರಕ್ಷಾ ಆಯುಕ್ತ'ರೆಂದು ನೇಮಕ ಮಾಡಲಾಗಿದೆ. ಅವರೂ ಸೇರಿದಂತೆ ಏಳು ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ. ಈ ಹೊಸ ವ್ಯವಸ್ಥೆಯ ಬಗ್ಗೆ ಜನರಿಗೆ ತಿಳುವಳಿಕೆ ನೀಡಬೇಕು. ಆಹಾರ ದುರ್ಮಿಶ್ರಣ ಕುರಿತು ಎಚ್ಚರಿಕೆ ನೀಡುವ ಶೀಟಿವೀರರಿಗೆ ಬಹುಮಾನ ಕೊಟ್ಟು ಸನ್ಮಾನಿಸಬೇಕು ಎಂದೆಲ್ಲಾ ಆದೇಶಗಳೇನೊ ಇವೆ. ಆದರೆ ಆ ಕುರಿತು ಹೆಚ್ಚಿನ ವಿವರಗಳು ಅಂತರ್ಜಾಲದಲ್ಲಿ ತಮಿಳಿನಲ್ಲಿ ಸಿಗುತ್ತಿವೆ ವಿನಾ ಕನ್ನಡದಲ್ಲಿಲ್ಲ. ಆಹಾರ ಸುರಕ್ಷತೆ ಮತ್ತು ಶಿಷ್ಟತೆ ಕುರಿತಂತೆ ಎಲ್ಲ ರಾಜ್ಯಗಳ ಆರೋಗ್ಯ ಸಚಿವರ ಮೂರು ದಿನಗಳ ಕಮ್ಮಟವೊಂದು ಕಳೆದ ಜನವರಿಯಲ್ಲಿ ಹೈದರಾಬಾದ್‌ನಲ್ಲಿ ನಡೆಯಿತು. ಆಹಾರ, ಔಷಧ ಮತ್ತು ಸಂಶೋಧನೆಗಳ ಮೇಲೆ ಕಟ್ಟುನಿಟ್ಟಿನ ನಿಗಾ ಇಡಲೆಂದು 'ಹೈದರಾಬಾದ್ ಕ್ರಿಯಾ ಯೋಜನೆ' ಯನ್ನು ಜಾರಿಗೆ ತರುತ್ತೇವೆಂದು ಕೇಂದ್ರ ಆರೋಗ್ಯ ಸಚಿವ ಗುಲಾಂ ನಬಿ ಆಝಾದ್ ಘೋಷಿಸಿದರು. ಅದರ ಫಲಶ್ರುತಿಯೋ ಎಂಬಂತೆ ಮನುಷ್ಯರ ಮೇಲೆ ನಡೆಯುತ್ತಿರುವ ಔಷಧ ಪರೀಕ್ಷೆಗಳನ್ನು ನಿಲ್ಲಿಸುವುದಾಗಿ ಕರ್ನಾಟಕದ ವೈದ್ಯ ಶಿಕ್ಷಣ ಸಚಿವರು ಮೇ 2 ರಂದು ಹೇಳಿದರು.

• • • • • • • • • • • • • • • • • •

# PSI/RSI-2 (2014)

**ಗರಿಷ್ಠ ಅಂಕಗಳು : 100** **ಅವಧಿ : 90 ನಿಮಿಷಗಳು**

1) ಭಾರತ ದೇಶದ ಜೊತೆ ಪ್ರಥಮವಾಗಿ ವ್ಯಾಪಾರ ಸಂಬಂಧವನ್ನು ಸ್ಥಾಪಿಸಿದ ದೇಶ
ಎ) ಇಂಗ್ಲೆಂಡ್ ಬಿ) ಫ್ರಾನ್ಸ್ ಸಿ) ಪೋರ್ಚುಗಲ್ ಡಿ) ಹಾಲೆಂಡ್

2) 'ಹಲ್ಮಿಡಿ ಶಾಸನ' ಗೊತ್ತಿರುವ ಅತ್ಯಂತ ಪುರಾತನ ಕನ್ನಡ ಶಾಸನ ಪತ್ತೆಯಾದ ಸ್ಥಳ
ಎ) ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕು ಬಿ) ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕು
ಸಿ) ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕು ಡಿ) ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕು

3) ಆಯುರ್ವೇದ ಮೂಲತಃ ಹುಟ್ಟಿಕೊಂಡಿದ್ದು
ಎ) ಸಾಮ ವೇದದಿಂದ ಬಿ) ಅಥರ್ವ ವೇದದಿಂದ
ಸಿ) ಯಜುರ್ ವೇದದಿಂದ ಡಿ) ರಿಗ್ ವೇದದಿಂದ

4) ಸಾರ್ವಜನಿಕ ಹಣದ ರಕ್ಷಕನೆಂದು ಯಾರಿಗೆ ಕರೆಯಲಾಗುತ್ತದೆ?
ಎ) ಸಂಸತ್ತು ಬಿ) ಭಾರತದ ರಾಷ್ಟ್ರಪತಿ
ಸಿ) ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕ ಡಿ) ಹಣಕಾಸು ಆಯೋಗ

5) 'ಪಾಲ್ಕ್ ಜಲಸಂಧಿ' ಯಾವ್ಯಾವ ದೇಶಗಳನ್ನು ಸೇರಿಸುತ್ತದೆ?
ಎ) ಭಾರತ ಮತ್ತು ಶ್ರೀಲಂಕಾ ಬಿ) ಉತ್ತರ ಮತ್ತು ದಕ್ಷಿಣ ಕೊರಿಯಾ
ಸಿ) ಬ್ರಿಟನ್ ಮತ್ತು ಫ್ರಾನ್ಸ್ ಡಿ) ಮಲೇಷ್ಯಾ ಮತ್ತು ಇಂಡೋನೇಷ್ಯಾ

6) ಒಂದು ರೈಲು ಒಂದು ಕಂಬವನ್ನು 20 ಸೆಕೆಂಡುಗಳಲ್ಲಿ ಮತ್ತು ಒಂದು 120 ಮೀ ಉದ್ದದ ಪ್ಲಾಟ್ ಫಾರಂ ಅನ್ನು 30 ಸೆಕೆಂಡುಗಳಲ್ಲಿ ಹಾದುಹೋದಲ್ಲಿ ರೈಲಿನ ಉದ್ದ
ಎ) 200 ಮೀ ಬಿ) 220 ಮೀ ಸಿ) 240 ಮೀ ಡಿ) ಕೊಟ್ಟಿರುವ ಅಂಕಗಳಿಂದ ಪತ್ತೆ ಮಾಡಲಾಗದು

7) ಎ ವ್ಯಕ್ತಿಯು ಬಿ ಗಿಂತ ಎಷ್ಟು ವರ್ಷ ಚಿಕ್ಕವನಾಗಿದ್ದಾನೋ ಅಷ್ಟೇ ವರ್ಷ ಸಿ ಗಿಂತ ದೊಡ್ಡವನು. ಬಿ ಮತ್ತು ಸಿ ಯವರ ವಯಸ್ಸನ್ನು ಒಟ್ಟುಗೂಡಿಸಿದರೆ 48 ವರ್ಷವಾದರೆ, ಎನ ವಯಸ್ಸೇನು?
ಎ) 24 ಬಿ) 30 ಸಿ) 20 ಡಿ) ಪತ್ತೆ ಮಾಡಲಾಗದು

8) ಈ ಕೆಳಕಂಡ ಸಂಸ್ಥೆಗಳು ಗ್ರಾಹಕರಿಗೆ ಸಾಲ ಕೊಡುತ್ತವೆ
ಎ) SAIL ಬಿ) RBI ಸಿ) IDBI ಡಿ) KMF

9) ನಾವಿಕರ ಕಾಯಿಲೆ ಈ ಕೆಳಕಂಡ ವಿಟಮಿನ್ ಕೊರತೆಯಿಂದ ಬರುತ್ತದೆ
ಎ) ಎ ಬಿ) ಬಿ ಸಿ) ಸಿ ಡಿ) ಇ

10) ಡೈನೊಸಾರ್ ಎಂಬ ಪದವನ್ನು ಯಾರು ಮೊಟ್ಟ ಮೊದಲ ಸಲ ಬಳಸಿದರು?
ಎ) ರಿಚರ್ಡ್ ಓವೆನ್ ಬಿ) ಲೂಯಿಸ್ ಬ್ರೌನ್ ಸಿ) ಲಿಯೊನಾರ್ಡ್ ಥಾಮ್ಸನ್ ಡಿ) ಎರ್ನಸ್ಟ್ ಹಾಕ್

11) ಮೈಸೂರು ಅರಮನೆಯ ಮುಖ್ಯ ವಿನ್ಯಾಸಕ ಯಾರು?
ಎ) ಹೆನ್ರಿ ಇರ್ವಿನ್ ಬಿ) ಎಡ್ವಿನ್ ಲ್ಯುಟೆನ್ಸ್ ಸಿ) ರವಿವರ್ಮ ಡಿ) ವೆಂಕಟಪ್ಪ

12) ಈ ಕೆಳಗಿನ ಯಾವ ಪುಸ್ತಕವನ್ನು ಕೃಷ್ಣದೇವರಾಯ (ವಿಜಯನಗರದ ರಾಜ) ರವರು ಬರೆದಿರುವುದಿಲ್ಲ?
ಎ) ಅಮುಕ್ತ ಮಾಲ್ಯದ ಬಿ) ಗದುಗಿನ ಭಾರತ ಸಿ) ಜಾಂಬವತಿ ಕಲ್ಯಾಣ ಡಿ) ರಸಮಂಜರಿ

13) 'ಬಸವ ಸಾಗರ ಅಣೆಕಟ್ಟು' ನ್ನು ಈ ಕೆಳಗಿನ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದೆ.

ಎ) ಕೃಷ್ಣಾನದಿ ಬಿ) ತುಂಗಾನದಿ ಸಿ) ವಾರಾಹಿ ನದಿ ಡಿ) ನೇತ್ರಾವತಿ ನದಿ

14) ಯಾರನ್ನು ಭಾರತದ ಹಸಿರುಕ್ರಾಂತಿಯ ಪಿತಾಮಹ ಎಂದು ಪರಿಗಣಿಸಲಾಗಿದೆ?

ಎ) ಡಾ|| ನಾರ್ಮನ್ ಇ. ಬೋರ್ಲಾಗ್ ಬಿ) ಡಾ|| ಎಸ್.ಎ. ಪಾಟೀಲ್

ಸಿ) ಡಾ|. ಎಂ. ಎಸ್. ಸ್ವಾಮಿನಾಥನ್ ಡಿ) ಡಾ|| ಎಮ್. ಮಹದೇವಪ್ಪ

15) ಈ ಕೆಳಗಿನ ಯಾವ ರಾಷ್ಟ್ರೀಯ ಉದ್ಯಾನ ಹುಲಿಗಳಿಗೆ ಪ್ರಸಿದ್ಧವಾಗಿದೆ?

ಎ) ಕಾಜಿರಂಗ ರಾಷ್ಟ್ರೀಯ ಉದ್ಯಾನ ಬಿ) ಗಿರ್ ರಾಷ್ಟ್ರೀಯ ಉದ್ಯಾನ

ಸಿ) ಕಾರ್ಬೆಟ್ ರಾಷ್ಟ್ರೀಯ ಉದ್ಯಾನ ಡಿ) ಕನ್ಹಾ ರಾಷ್ಟ್ರೀಯ ಉದ್ಯಾನ

16) 'ಮಲಗಿರುವ ಬುದ್ಧನ ಪರ್ವತ' ಇರುವ ಜಿಲ್ಲೆ

ಎ) ಕಲಬುರ್ಗಿ ಬಿ) ಯಾದಗಿರಿ ಸಿ) ಮೈಸೂರು ಡಿ) ರಾಮನಗರ

17) ಬೌದ್ಧಧರ್ಮವು ವ್ಯಾಪಕವಾಗಿ ಪ್ರಚಾರವಾಗಲು ಕಾರಣವಾದ ಭಾಷೆ

ಎ) ಸಂಸ್ಕೃತ ಬಿ) ಪಾಲಿ ಸಿ) ತಮಿಳು ಡಿ) ಗ್ರೀಕ್

18) ಬಹಮನಿ ಸಾಮ್ರಾಜ್ಯದ ಪ್ರಥಮ ರಾಜಧಾನಿಯಾಗಿದ್ದುದು

ಎ) ದೌಲತಾಬಾದ್ ಬಿ) ಗೋಲ್ಕೊಂಡ ಸಿ) ಕಲಬುರ್ಗಿ ಡಿ) ಬೀದರ್

19) ಕಳಿಂಗ ಯುದ್ಧ ನಡೆದ ಅವಧಿ

ಎ) 162-161 ಕ್ರಿ.ಪೂ. ಬಿ) 362-361 ಕ್ರಿ.ಪೂ.

ಸಿ) 262-261 ಕ್ರಿ.ಪೂ. ಡಿ) 462-461 ಕ್ರಿ.ಪೂ.

20) 'ಮಾಡು ಇಲ್ಲವೇ ಮಡಿ' ಘೋಷಣೆ ಈ ಕೆಳಗಿನ ಯಾವ ಚಳುವಳಿಗೆ ಸಂಬಂಧಿಸಿದೆ?

ಎ) ಸ್ವದೇಶಿ ಚಳವಳಿ ಬಿ) ಅಸಹಕಾರ ಚಳವಳಿ

ಸಿ) ನಾಗರಿಕ ಅಸಹಕಾರ ಚಳವಳಿ ಡಿ) ಭಾರತ ಬಿಟ್ಟು ತೊಲಗಿ ಚಳವಳಿ

21) ರೂ. 2.80 ಮತ್ತು 40 ಪೈಸೆಯ ಅನುಪಾತವೇನು?

ಎ) 1:7 ಬಿ) 1:14 ಸಿ) 2:7 ಡಿ) 7:1

22) $x^2+4y^2 = 4xy$ ಆದರೆ 4xy

ಎ) 2:1 ಬಿ) 1:2 ಸಿ) 1:1 ಡಿ) 1:3

23) ಒಂದು ಅಂಕೆಯ 40%50 ಆದರೆ, ಅಂಕೆಯೇನು?

ಎ) 125 ಬಿ)250 ಸಿ) 80 ಡಿ) 120

24) ರೂ. 1,500 ರ 5 ವರ್ಷಕ್ಕೆ ಶೇಕಡ ಆರರಂತೆ ಸರಳಬಡ್ಡಿ ಪತ್ತೆ ಮಾಡಿರಿ.

ಎ) ರೂ. 500 ಬಿ) ರೂ. 600 ಸಿ) ರೂ. 450 ಡಿ) ರೂ. 250

25) ಒಬ್ಬ ವ್ಯಕ್ತಿಯು ಒಂದು ವಸ್ತುವನ್ನು ರೂ. 50ಕ್ಕೆ ಕೊಂಡು, ರೂ. 60ಕ್ಕೆ ಮಾರಿದರೆ ಅವನ ಲಾಭ

ಎ) 16.66% ಬಿ) 20% ಸಿ) 25.5% ಡಿ) 25.67%

26) ಮೈಸೂರಿನಲ್ಲಿ 1935ರಲ್ಲಿ ಮೊದಲನೆಯದಾಗಿ ರೇಡಿಯೋ ಸ್ಟೇಷನ್ ಸ್ಥಾಪಿಸಿದವರು

ಎ) ರಾಮಸ್ವಾಮಿ ಬಿ) ವಿಶ್ವೇಶ್ವರಯ್ಯ

ಸಿ) ರಾಧಾಕೃಷ್ಣನ್ ಡಿ) ಡಾ.ಎಂ.ವಿ. ಗೋಪಾಲಸ್ವಾಮಿ